**ಮೂ.ದಾ.ನಂ.66/2018**

ಪಿ.ಡಬ್ಲ್ಯು.1

(ಇಂದು ದಿನಾಂಕ: **04-03-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಶ್ರೀ.ವಾಯ್.ವಿ.ಎಸ್ ವಕೀಲರಿಂದಃ**

ಈ ದಾವೆಯನ್ನು ಮಾಡುವ ಪೂರ್ವದಲ್ಲಿ ಸರ್ವೆಗಾಗಿ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸರ್ವೆ ಅರ್ಜಿಯಲ್ಲಿ ನಮ್ಮ ಬಾಜುದಾರರು ಎಂದು ಪುರುಪ್ಪೋತ್ತಮ ಕೃಷ್ಣಾ ನಾಯ್ಕು ಇವರನ್ನು ತೋರಿಸಿ ಇರುತ್ತೇನೆ ಎಂದರೆ ಸರಿ. ನಾನು ಅರ್ಜಿಯನ್ನು ನೀಡಿದ ಪ್ರಕಾರ ಭೂ ಮಾಪಕರು ದಿನಾಂಕಃ 22/04/2017 ರಂದು ಸ್ಥಳಕ್ಕೆ ಬಂದಿದ್ದರು ಎಂದರೆ ಸರಿ. ನಾನು ಸರ್ವೆಗಾಗಿ ನೀಡಿದ ಅರ್ಜಿಯಲ್ಲಿ ಪ್ರತಿವಾದಿಯರನ್ನಾಗಲೀ ಮತ್ತೊಬ್ಬ ಹಿಸ್ಸಾದಾರರಾದ ಬೀರಪ್ಪಾ ಶಿವಪ್ಪ ಪಟಗಾರ ಇವರನ್ನು ತೋರಿಸಲಿಲ್ಲ ಎಂದರೆ ಸರಿ. ಹೀಗಾಗಿ ಅವರಿಗೆ ದಿಃ 22/04/2017 ಕ್ಕೆ ಸಂಬಂಧಿಸಿದಂತೆ ಯಾವುದೇ ನೋಟೀಸು ಹೋಗಿರುವುದಿಲ್ಲ.

ದಿಃ 22/04/2017 ರಂದು ಆದ ಸರ್ವೆಗೆ 1ನೇ ಪ್ರತಿವಾದಿಯು ಹಾಜರ ಇದ್ದರು. ಪುರುಷೋತ್ತಮ ಕೃಷ್ಣಾ ನಾಯ್ಕು ಇವರು ಬಂದಿರುವ ವಿಚಾರ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯು ಸ್ಥಳದಲ್ಲಿ ತಮಗೆ ನೊಟೀಸು ಮಾಡಲಿಲ್ಲ ಎಂದು ತಕರಾರು ತೆಗೆದಿದ್ದರು ಎಂದರೆ ಸರಿ. ನಮ್ಮ ಬಾಜುದಾರರು ಪ್ರತಿವಾದಿಯರೇ ಹೊರತು ಪುರುಷೋತ್ತಮ ಕೃಷ್ಣಾ ನಾಯ್ಕು ಅಲ್ಲ ಎಂದರೆ ಸರಿ. ಸದ್ರಿ ಸರ್ವೆ ಸಂದರ್ಭದಲ್ಲಿ ಪುರುಷೋತ್ತಮ ಕೃಷ್ಣಾ ನಾಯ್ಕು ಈತು ನಾನು ಬಾಜುದಾರನು ಅಲ್ಲದಿದ್ದರೂ ಸಹ ನನಗೆ ನೋಟೀಸ ನೀಡಿದ್ದಾರೆ ಎಂದು ತಕರಾರು ತೆಗೆದಿದ್ದರು ಎಂದರೆ ಸರಿ ಹಾಗಾಗಿ ಸದ್ರಿ ಸಂದರ್ಭದಲ್ಲಿ ಹಾಜರ ಇದ್ದ ಭೂಮಾಪಕರು ವಾಪಸ್ಸು ಹೋಗಿರುತ್ತಾರೆ ಎಂದರೆ ಸರಿ.

**ಮೂ.ದಾ.ನಂ.66/2018**

ಪಿ.ಡಬ್ಲ್ಯು.1

ದಿಃ 19/01/2018 ರಲ್ಲಿ ಪುನಃ ಭೂ ಮಾಪಕರು ಮೋಜಣಿ ಮಾಡುವ ಕುರಿತು ಬಂದಿದ್ದರು ಎಂದರೆ ಸರಿ. 1ನೇ ಪ್ರತಿವಾದಿಯು ಸದ್ರಿ ಸಂದರ್ಭದಲ್ಲಿ ಬಂದ ಸರ್ವೆಯರಗೆ ತಮ್ಮ ಜಾಗದ ಸರ್ವೆಯನ್ನು ಮಾಡಿ ಎಂದು ತಿಳಿಸಿದರು ಎಂದರೆ ಸಾಕ್ಷಿಯು ಭೂಮಾಪಕರು ನೀವು ಅರ್ಜಿಯನ್ನು ಹಾಕಿ ನಾವು ಸರ್ವೆ ಮಾಡುತ್ತೇವೆ ಎಂದು 1ನೇ ಪ್ರತಿವಾದಿಗೆ ತಿಳಿಸಿದರು ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ಸದ್ರಿ ಸಂದರ್ಭದಲ್ಲಿ ಇನ್ನೊಬ್ಬ ಸಾಮೂಹಿಕ ಹಕ್ಕುದಾರರಾದ ಬೀರಪ್ಪ ಶಿವಪ್ಪ ಪಟಗಾರ ಇತನಿಗೆ ನೋಟೀಸ ನೀಡಲಿಲ್ಲ ಎಂದು ತಕರಾರನ್ನು ತೆಗೆದಿದ್ದರು ಎಂದರೆ ಸರಿ. ಸದ್ರಿ ಸಂದರ್ಭದಲ್ಲಿ ಭೂ ಮಾಪಕರು ನನ್ನ ಜಾಗವನ್ನು ಸರ್ವೆ ಮಾಡಿ ಗಡಿ ಗುರುತು ಹಾಕಿರುತ್ತಾರೆ. ಈ ಆಳತೆಯ ಕುರಿತಾಗಿ ನಕಾಶೆ ಹಾಗೂ ವರದಿಯು ತಯಾರಾಗಿರಬಹುದು.

ಈ ಸರ್ವೆಯ ವಿಷಯವನ್ನು ನಾವು ದಾವೆ ದಾಖಲು ಮಾಡುವಾಗ ನನ್ನ ದಾವಾ ಪತ್ರದಲ್ಲಿ ನಮೂದಿಸಲಿಲ್ಲ ಎಂದರೆ ಸರಿಯಲ್ಲ. ಸದ್ರಿ ನಕಾಶೆ ಹಾಗೂ ವರದಿಯನ್ನು ಸರ್ವೆ ಇಲಾಖೆಯಿಂದ ತರಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಈ ವಿಷಯವನ್ನು ನನ್ನ ವಾದ ಪತ್ರದಲ್ಲಿ ನಮೂದಿಸಿ ಸದ್ರಿ ನಕಾಶೆಯನ್ನು ಹಾಜರುಪಡಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಹೋಗಲು ಆಗಲಿಲ್ಲ ಆದ್ದರಿಂದ ತರಲಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಯು 2025 ನೇ ಸಾಲಿನಲ್ಲಿ ಕೂಡ ಸದ್ರಿ ದಾಖಲೆಯನ್ನು ಹಾಜರುಪಡಿಸಲು ತನಗೆ ತೊಂದರೆ ಇತ್ತು ಎಂದು ನುಡಿಯುತ್ತಾರೆ. ಸದ್ರಿ ದಿನದಂದು ಭೂಮಾಪಕರು ಆಳತೆ ಮಾಡಿದಂತಹ ಸಂದರ್ಭದಲ್ಲಿ ಜಾಗವು ವಾದ ಪತ್ರದಲ್ಲಿ ನಮೂದಿಸಿದಷ್ಟು ಇಲ್ಲ ಎಂದು ತಿಳಿಸಿದ್ದಾರೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ಸದ್ರಿ ನಕಾಶೆಯನ್ನು ತರಲು ಹೋಗಲಿಲ್ಲ ಎಂದರೆ ಸರಿಯಲ್ಲ.

**ಮೂ.ದಾ.ನಂ.66/2018**

ಪಿ.ಡಬ್ಲ್ಯು.1

ದಿಃ 07/12/2018 ರಂದು ಜಿಲ್ಲಾಧಿಕಾರಿಗಳ ತಾಂತ್ರೀಕ ಸಹಾಯಕರು ಹಾಗೂ ಪದನಿಮಿತ್ತ ಭೂ ದಾಖಲೆಗಳ ನಿರ್ದೇಶಕರಿಂದ ನನಗೆ ತಿಳುವಳಿಕೆ ಪತ್ರ ಬಂದಿದೆ ಎಂದರೆ ಸರಿಯಲ್ಲ. ಈ ತಿಳುವಳಿಕೆ ಪತ್ರವನ್ನು ಸರ್ವೆ ನಂ. 58 ಹಾಗೂ 59 ರ ಎಲ್ಲಾ ಹಿಸ್ಸಾದಾರರಿಗೆ ನೀಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. DDLR ಇವರು ಸರ್ವೆ ನಂ. 58 ರ ಹಾಗೂ 59 ರ ಎಲ್ಲಾ ಹಿಸ್ಸೇದಾರರಿಗೆ ನೋಟೀಸನ್ನು ನೀಡಿ ವಿಚಾರಣೆ ನಡೆಸಿ ಪೋಟ್ ಹಿಸ್ಸಾಗಳನ್ನು ರದ್ದುಪಡಿಸಿ ಹೊಸದಾಗಿ ಪೋಡಿ ಕೆಲಸ ಮಾಡಲು ದಿಃ 22/12/2018 ರಂದು ಆದೇಶ ಮಾಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಮೂಲ ದಾವಾ ನಂಬರ 145/2011 ರಲ್ಲಿ ಆದ ಕಮೀಷನ ಆದೇಶದ ಮೇರೆಗೆ ಮುಂದುವರಿದು ಈ ಮೇಲೆ ಹೇಳಿದ ಆದೇಶ ಆಗಿದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ